ಒಂದು ‘ವಿಳಾಸ’ ಅಂತ ಐತಿ. ಆದ್ರೂ ಸಹಿತ ಜನರಲ್ಲಿ ಕೆಲವೊಂದು ಮೂಢನಂಬಿಕೆಗಳು ತುಂಬಿಕೊಂಡವ, ಶಿಕ್ಷಣದ ಬಗ್ಗೆ ಸರಿಯಾದ ಅರಿವಿಲ್ಲ. ಇತ್ತೀಚೆಗೆ ಶಿಕ್ಷಣಕ್ಕೆ ತೆರೆದು ಕೊಂಡರೂ ಕೂಡ ಮೇಲ್ವರ್ಗದವರ ಹೋಲಿಕೆನಲ್ಲಿ ಅದು ಬಹಳ ಕಡಿಮೆ. ವಿಶೇಷವಾಗಿ, ಶಿಕ್ಷಣ ಪಡೆಯೋ ಹೆಣ್ಣುಮಕ್ಕಳ ಸಂಖ್ಯೆಯಂತೂ ತುಂಬಾ ಕಮ್ಮಿ ಇದೆ.

ನಮ್ಮ ಜನದೊಳಗೆ ಸುಮಾರು ಶೇಕಡಾ ಇಪ್ಪತ್ತು ಜನ ವ್ಯಾಪಾರ ವಹಿವಾಟು ಮಾಡಿ ಆರ್ಥಿಕವಾಗಿ ಬಹಳ ಅನುಕೂಲವಾಗಿದ್ದಾರ. ಕೋಟ್ಯಧೀಶರಿದ್ದಾರ... ಆರ್ಥಿಕ ಸ್ಥಿತಿಗತಿನಾಗ ಸ್ವಲ್ಪನಾದ್ರೂ ಬದಲಾವಣೆ ಆಗ್ಯದ. ಹೀಗೆ ಬದಲಾದವರು ಪೂರ್ತಿ ಕೇರ್‌ಲೆಸ್ ಅದಾರ. ಇವರಿಗೆ ಮೀಸಲಾತಿ, ಶಿಕ್ಷಣ ಇವೆಲ್ಲ ಬೇಕಾಗಿಲ್ಲ. ಇನ್ನು, ಶೇಕಡಾ ಇಪ್ಪತ್ತೈದು ಮಂದಿ ಜೋತಿಷ ಹೇಳೋ ಕೆಲಸ ಮಾಡ್ತಾರ. ಇವರು ನಾವು ಕಲ್ಪನೇನೂ ಮಾಡಲಾರದಷ್ಟು ಶ್ರೀಮಂತರಿದ್ದಾರ. ಇವರಿಗೂ ಸಮುದಾಯದ ಕಷ್ಟಗಳೆಲ್ಲ ಏನೂ ಬೇಡ. ಬೀದಿಮೇಲೆ ಬದುಕೋವ್ರು, ಸ್ಲಂನಲ್ಲಿ ಬದುಕೋವ್ರ ಬಗ್ಗೆ ಅವರು ಚಿಂತೆ ಮಾಡಲ್ಲ. ಬೆಳಗ್ಗಿಯಿಂದ ಸಂಜೆತನಕ ಇಪ್ಪತ್ತು ಮೂವತ್ತು ಕೆ.ಜಿ.ಗಟ್ಟಲೆ ಪಾತ್ರೆ ಹೊತ್ಗಂಡು ಊರೂರು ತಿರುಗಿ ಹೊಟ್ಟೆ ಹೊರೆಯೋ ಜನ ಇವತ್ತೂ ನಮ್ಮೊಳಗೆ ಬಹಳ ಇದ್ದಾರ. ಬಾಚಣಿಗೆ, ಹೇರ್‌ಪಿನ್ನು ಮಾರೋವ್ರು ಇನ್ನೊಂದಷ್ಟು ಮಂದಿ. ಹಿಂಗೆ ತಿರುಗೋ ಹೆಣ್ಣುಮಕ್ಕಳ ಸ್ಥಿತಿಯಂತೂ ಕೇಳೋದೇ ಬೇಡ. ಹೊಟ್ಟೆ ತುಂಬಸಾದೇನೆ ಇವರಿಗೆ ಪಾಡು. ಅಂತದ್ರಲ್ಲಿ ಇವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಸಾಕ ಹೆಂಗ ಸಾಧ್ಯ ಹೇಳ್ರಿ? ನಾನು ಗಟ್ಟಿ ದನಿಯಲ್ಲಿ ಹೇಳೋದು ಇಷ್ಟೆ: ನಮಗೆ ಮೀಸಲಾತಿ ಬೇಕು. ಹೆಚ್ಚುಕಡಿಮೆ ಎಲ್ಲ ಅಲೆಮಾರಿಗಳ ಬದುಕೂ ಹೀಗೇ ಅತಂತ್ರ ಆಗಿದ್ದು ಸರ್ಕಾರ ಈ ಸಮುದಾಯಗಳಿಗೆ ಆದ್ಯತೆ ಕೊಡುವುದು ಬಹಳ ಅಗತ್ಯವಿದೆ. ಮೀಸಲಾತಿ ಬೇಕು, ಸರ್ಕಾರದ ಸೌಲಭ್ಯ ಬೇಕು ಅಂತ ನಾನು ಮನಃಪೂರ್ವಕ ಕೇಳೋದು ಇಂಥಾ ಜನರಿಗಾಗಿ. ತೀರ ಕೆಳಮಟ್ಟದಲ್ಲಿ ಬದುಕೋ ಜನರೂ ಮನುಷ್ಯರಾಗಿ ಬಾಳಬೇಕಲ್ರಿ... ಇವರೇ ಸುಮಾರು ಶೇಕಡಾ ಅರವತ್ತು ಮಂದಿ ಇದ್ದಾರ. ಅದಕ್ಕ ಏನು ಮಾಡಬೇಕೋ ಆ ಪ್ರಯತ್ನ ನಡದದ, ಮನುಷ್ಯರ ಬಗ್ಗೆ ಕಾಳಜಿ ಮಾಡೋ ಎಲ್ಲರೂ ಇದ್ರಲ್ಲಿ ಸೇರಿದ್ರೆ ಏನಾದ್ರು ಒಳ್ಳೆದಾಗಬಹುದು ಅನ್ನೋದು ನನ್ನಂಥವನ ಆಸೆ. ಇಡೀ ರಾಜ್ಯದಲ್ಲಿ ಇವತ್ತಿಗೂ ನಮ್ಮ ಕಮ್ಯುನಿಟಿಯ ಒಬ್ಬನೇ ಒಬ್ಬ ಜಿಲ್ಲಾ ಪಂಚಾಯತಿ ಸದಸ್ಯ/ಸ್ಯೆ ಇಲ್ಲ. ಎಲ್ಲೋ ಒಬ್ಬಿಬ್ಬರು ಗ್ರಾಮ ಪಂಚಾಯತಿ ಸದಸ್ಯರಿದ್ದಾರ, ಅದೂ ತೀರಾ ಇತ್ತೀಚೆಗೆ. ಅಲ್ಲೀನೂ ಸಮಾನತೆ ಇಲ್ಲ, ಬೇರೆ ಸದಸ್ಯರಿಗೆ ಕಾಫಿ, ಚಹಾ ತರೋ ಕೆಲಸಾನ ನಮ್ಮ ಮಂದಿಯಿಂದ ಮಾಡಿಸ್ತಾರ. ಅಸ್ತಿತ್ವ ಇದ್ದರೂ ಲೆಕ್ಕಕ್ಕಿಲ್ಲದ ಸಮುದಾಯ ನಮ್ಮದು. ನಮ್ಮ ಸಮುದಾಯಕ್ಕೆ ಇಬ್ಬರು ವೈರಿಗಳು ಇದ್ದಾರ. ಅದೇನು ಗೊತ್ತ? ನಮ್ಮದೇ ಜನಗಳ ಅಲಕ್ಷ್ಯ, ವಿರೋಧ ಒಂದು ಕಡೆ; ಹೊರಗಿನವರ ವಿರೋಧ ಇನ್ನೊಂದು ಕಡೆ. ಇದು ಕತ್ತಿ ಮ್ಯಾಲಿನ ನಡಿಗೆ... ನೋಡಿ... ಇಲ್ಲೊಂದು ಚೋದ್ಯ ಐತಿ, ಗೊಂದಲಿಗರನ್ನ ದಲಿತರ ಹಾಗೆ ಪೂರ್ತಾ ಅಸ್ಪೃಶ್ಯರ ಹಾಗೆ ಪರಿಗಣಿಸಲ್ಲ. ಹಂಗಾಗಿ ನಮ್ಮ ಜನಗಳಲ್ಲಿ ನಾವು ಅವರಿಗಿಂತ ಶ್ರೇಷ್ಟರು ಅನ್ನೋ ಭ್ರಮೆ ಇದೆ. ಇದೇ ಕಾರಣಕ್ಕಾಗೇನೆ ‘ಅಲ್ಪಸಂಖ್ಯಾತ’ರೊಳಗೆ ನಮ್ಮನ್ನು ಸೇರಿಸೋದಕ್ಕೆ ನಮ್ಮ ಸಮುದಾಯದ ಒಳಗೇನೇ ವಿರೋಧ ಐತಿ. ನಮ್ಮನ್ನ ಅಸ್ಪೃಶ್ಯರ ಥರಾ ನೋಡಲ್ಲ ಅನ್ನೋದು ಸಂತೋಷಪಡಬೇಕಾದ ವಿಷಯಾನೋ ದುಃಖ ಪಡಬೇಕಾದ ವಿಷ್ಯಾನೋ ನಂಗೆ ಅರ್ಥ ಆಗವಲ್ದು...

ನೋಡಿ... ಮೀಸಲಾತಿಯಿಂದಾಗಿ ಇವತ್ತು ವಾಲ್ಮೀಕಿ ಸಮಾಜ, ಕುರುಬರು, ಬಂಜಾರ ಸಮುದಾಯಗಳು ನಮಗಿಂತ ನೂರು ಪಾಲು ಸುಧಾರಿಸಿವೆ. ಹಿಂದೆಯೇ ನಮ್ಮನ್ನೂ ಎಸ್.ಸಿ ಅಥವಾ ಎಸ್.ಟಿ ಒಳಗೋ ಕೂರಿಸಿದ್ರ ನಮ್ಮ ಸಮುದಾಯದ ಮಕ್ಕಳು ಕೂಡ ಸರ್ಕಾರಿ ನೌಕರಿ ಒಳಗೆ ಇರ್ತಾ ಇದ್ರು, ಯಾರೋ ಐಎಎಸ್ ಅಥವಾ ಐಪಿಎಸ್ ಮಾಡ್ತಾ ಇದ್ರೋ ಏನೋ... ರಾಜಕೀಯ ಮೀಸಲಾತಿ ಸಿಗ್ತಾ ಇತ್ತು. ಸ್ವಾತಂತ್ರ್ಯ ಸಿಕ್ಕಿ ಎಪ್ಪತ್ತೈದು ವರ್ಷಗಳ ಮೇಲಾಯ್ತು, ಸಂವಿಧಾನದ ಆಶಯವೇ ಸಮಾನತೆ, ಸಮಾನ ಅವಕಾಶ, ಭ್ರಾತೃತ್ವ. ವಾಸ್ತವ ಬದುಕಿನಲ್ಲಿ ಇವೆಲ್ಲ ಎಲ್ಲಿದೆ ಮೇಡಂ? ಇವತ್ತಿಗೂ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಬೆಳೆದವರನ್ನೇ ಬೆಳೆಸ್ತಾ ಬಂದಾರ. ನಮ್ಮ ಸಮುದಾಯ ಅವರಿಗೆ